S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್‌ಃ ೪೪/2025

**ಚಾ.ಸಾ.–14 ಪ್ರಾ.ಸಾ.–11**

| | |
|---|---|
| **ಸಾಕ್ಷಿದಾರರ ಹೆಸರು** | **ಬಿರೇಶ ಜಿ** |
| **ತಂದೆಯ ಹೆಸರು** | **ವೆಂಕಟೇಶ** |
| **ವಯಸ್ಸು** | **24 ವರ್ಷಗಳು** |
| **ಉದ್ಯೋಗ** | **ಹೋಟೆಲ್ ಕೆಲಸ** |
| **ವಾಸ** | **ಗೊರವನಹಳ್ಳಿ** |

**ದಿನಾಂಕಃ 06.07.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 13 ವರಸೆಯಲ್ಲಿ ನನ್ನ ಅಣ್ಣ ಆಗಬೇಕು. ಈಗ ನನಗೆ ತೋರಿಸುತ್ತಿರುವ ದಿಃ1.4.2025 ರ ನೋಟಿಸಿನಲ್ಲಿ ಕಾಣಿಸುವ ಸಹಿ ನನ್ನದು. ದಾಖಲೆಯನ್ನು ಈಗಾಗಲೆ ನಿಪಿ 21 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 21 ಬಿ ಎಂದು ಗುರುತಿಸಲಾಯಿತು. ಅದನ್ನು ಪೊಲಿಸ್ ಠಾಣೆಯಲ್ಲಿ ಮಾಡಿದ್ದೇನೆ. ಗಲಾಟೆ ಆದ ವಿಚಾರಕ್ಕೆ ಸಂಬಂಧಿಸಿದಂತೆ ಮಾಡಿದ್ದೇನೆ. ಪ್ರಶಾಂತ ರವರ ಮೇಲೆ ಹಲ್ಲೆಗೆ ಸಂಬಂಧಿಸಿದಂತೆ ಸಹಿ ಮಾಡಿದ್ದೇನೆ. ಅವರಿಗೆ ಯಾರು ಹಲ್ಲೆ ಮಾಡಿದ್ದಾರೆ ಗೊತ್ತಿಲ್ಲ. ನಂತರ ಪೊಲೀಸರು ನನಗೆ ಸಹಿ ಮಾಡಲು ಕೇಳಿದ್ದಾರೆ ನಾನು ಸಹಿ ಮಾಡಿದ್ದೇನೆ. ಆರೋಪಿ ಸಚಿನನ್ನು ನಾನು ನೋಡಿಲ್ಲ. ಈಗ ನನಗೆ ತೋರಿಸುತ್ತಿರುವ ದಿಃ 1.4.2025 ರ ಅಮಾನತು ಮಹಜರನಲ್ಲಿ ಇರುವ ಸಹಿ ನನ್ನದು , ಸಾಕ್ಷಿ ಸಹಿಯನ್ನು ನಿಪಿ 22 ಬಿ ಎಂದು ಗುರುತಿಸಲಾ ಯಿತು. ಅದನ್ನು ಮದ್ದೂರು ಪೊಲಿಸ್ ಠಾಣೆಯಲ್ಲಿ ಮಾಡಿದ್ದೇನೆ. ಪೊಲೀಸರು ಸಹಿ ಮಾಡಲು ಕೇಳಿದ್ದರಿಂದ ಮಾಡಿದ್ದೇನೆ. ಈಗ ನನಗೆ

ತೋರಿಸುತ್ತಿರುವ ಭಾವಚಿತ್ರದಲ್ಲಿ ನಾನು ಕಂಡುಬರುತ್ತೇನೆ. ಅದು ಈಗಾಗಲೆ ನಿಪಿ 23 ಆಗಿರುತ್ತದೆ. ಭಾವಚಿತ್ರದಲ್ಲಿ ಬೀರೇಶ ಮತ್ತು ಆರೋಪಿ ಸಚಿನ್ ಕಂಡುಬರುತ್ತಾರೆ. ಅದನ್ನು ಆರೋಪಿ ಸಚಿನ್ ಮನೆ ಬಳಿ ಮಾಡಲಾಗಿದೆ. ಯಾವ ವಿಚಾರಕ್ಕೆ ನನಗೆ ಗೊತ್ತಿಲ್ಲ. ಸದರಿ ಭಾವಚಿತ್ರದಲ್ಲಿ ದ್ವಿಚಕ್ರ ವಾಹನ ಕಂಡುಬರುತ್ತದೆ. ಸದರಿ ವಾಹನ ಸಂಖ್ಯೆ ನನಗೆ ಗೊತ್ತಿಲ್ಲ. ಅದು ಯಾರಿಗೆ ಸೇರಿದ್ದು ನನಗೆ ಗೊತ್ತಿಲ್ಲ. ಗಾಡಿಯನ್ನು ಯಾವ ಪೊಲಿಸರಿಗೆ ಕೊಟ್ಟಿದ್ದಾರೆ ಗೊತ್ತಿಲ್ಲ. ಪೊಲಿಸರು ಆರೋಪಿ ಸಚಿನ್ ಮನೆ ಬಳಿ ಕರೆದುಕೊಂಡು ಹೋಗಿರುತ್ತಾರೆ. ನನ್ನನ್ನು ಯಾಕೆ ಕರೆದುಕೊಂಡು ಹೋಗಿದ್ದರು ಗೊತ್ತಿಲ್ಲ. ನಿಪಿ 21, 22 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ದಿಃ**1.4.2025** ರಂದು ಮದ್ದೂರು ಪೊಲಿಸ್ ಠಾಣೆಗೆ ಮಳವಳ್ಳಿಯ ಪೊಲಿಸ್ ಉಪಾಧೀಕ್ಷಕರು ನನ್ನನ್ನು ಕರೆಸಿದ್ದರು ಎಂದರೆ ಸರಿ. ಠಾಣೆಯಲ್ಲಿ ಸಚಿನ್ ಅವರನ್ನು ನನ್ನನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ ಸಚಿನ್ ತನ್ನ ಜೊತೆ ಬಂದರೆ ನಿಪಿ **23** ರಲ್ಲಿ ತೋರಿಸಿರುವ ವಾಹನವನ್ನು ತೋರಿಸುವುದಾಗಿ ನನ್ನ ಮುಂದೆ ಹೇಳಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಿಪಿ **21** ರ ನೋಟಿಸನ್ನು ಪಂಚರಾಗಿ ಸಹಕರಿಸಲು ಪೊಲಿಸರು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ನಾನು ಪೊಲಸ್ ಠಾಣೆಯಿಂದ ನಿಪಿ **23** ರಲ್ಲಿ ತೋರಿಸಿರುವ ಜಾಗಕ್ಕೆ ಆರೋಪಿ ತೋರಿಸಿದಂತೆ ಪೊಲಿಸ ಜೀಪಿನಲ್ಲಿ ಹೋಗಿದ್ದೆವು ಎಂದರೆ ಸರಿಯಲ್ಲ. ಆರೋಪಿ ಗೊರವನಹಳ್ಳಿಯ ತನ್ನ ಮನೆ ಬಳಿ ವಾಹನವನ್ನು ನಿಲ್ಲಿಸುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಅವರ ಮನೆಯ ದನದ ಕೊಟ್ಟಿಗೆಯಲ್ಲಿ ನಿಂತಿದ್ದ ನಿಪಿ **23** ರಲ್ಲಿ ಕಂಡುಬರುವ ದ್ವಿಚಕ್ರ ವಾಹನವನು ಆರೋಪಿ ಇದೆ ಕೃತ್ಯಕ್ಕೆ ಉಪಯೋಗಿಸಿದ ವಾಹನ ಎಂದು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೊಲಿಸರು ಅದನ್ನು ಪರೀಕ್ಷಿಸಿದಾಗ ವಾಹನ ಸಂಖ್ಯೆ ಕೆಎ **11** ಇವಿ **4330**

ಹೀರೊಹೊಂಡ ಸ್ಪ್ಲೆಂಡರ್ ಪ್ಲಸ್ ಮೋಟಾರು ಸೈಕಲು ಆಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಸದರಿ ವಾಹನವನ್ನು ಪೊಲಿಸರು ನನ್ನ ಮತ್ತು ಬೀರೇಶ ಅವರ ಸಮಕ್ಷಮ ನಿಪಿ 22 ರ ಮಹಜರಡಿಯಲ್ಲಿ ಸ್ವಾಧೀನಪಡಿಸಿಕೊಂಡರು ಎಂದರೆ ಸರಿಯಲ್ಲ. ವಾಹನವನ್ನು ಹಾಜರುಪಡಿಸಿದ ಸಂದರ್ಭದಲ್ಲಿ ನಿಪಿ 23 ಭಾವಚಿತ್ರವನ್ನು ತೆಗೆಯಲಾಗಿದೆ ಎಂದರೆ ಸಾಕ್ಷಿದಾರರು ಪೊಲೀಸರು ನಿಂತುಕೊಳ್ಳಲು ಕೇಳಿದರು ನಾನು ನಿಂತುಕೊಂಡಿದ್ದೆ ಎನ್ನುತ್ತಾರೆ. ನಾನು ದ್ವಿಚಕ್ರ ವಾಹನವನ್ನು ಹಾಗೂ ಆರೋಪಿ ಸಚಿನವರನ್ನು ನಿಪಿ 23 ಸ್ಥಳದಲ್ಲಿ ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಯನ್ನು ಓದಿ ತಿಳಿದು ಅರ್ಥ ಮಾಡಿಕೊಂಡು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಆರೋಪಿ ಸಚಿನ್ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಅವರು ಪರಿಚಯ ಇರುವುದರಿಂದ ಅವರಿಗೆ ಸಹಾಯವಾಗಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ